# ಕರ್ನಾಟಕ ಸರ್ಕಾರ

ಸಂ:ಡಿಡಬ್ಲ್ಯೂಸಿ:ಐಸಿಡಿ:ಪಿಆರ್‌ಸಿ:08:2018–19

ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಡಾ:ಅಂಬೇಡ್ಕರ್ ವೀಧಿ, ಬಹುಮಹಡಿಗಳ ಕಟ್ಟಡ
**ಬೆಂಗಳೂರು, ದಿನಾಂಕ:06.07.2018**

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
30 ಜಿಲ್ಲೆಗಳು.

ಮಾನ್ಯರೆ,

ವಿಷಯ: 06 ತಿಂಗಳಿಂದ 3 ವರ್ಷದ ಮಕ್ಕಳಿಗೆ ನೀಡುತ್ತಿರುವ ಪುಡಿರೂಪದ ಆಹಾರ ಮಾದರಿಯ ಪ್ಯಾಕೇಟ್‌ಗಳನ್ನು ರಾಜ್ಯಾದ್ಯಂತ ಏಕರೂಪವಾಗಿ ವಿನ್ಯಾಸಗೊಳಿಸಿರುವ ಕುರಿತು.

** ** **

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17.04.2018ರಂದು ನಡೆದ ಸಭೆಯಲ್ಲಿ 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ನೀಡುತ್ತಿರುವ ಪುಡಿರೂಪದ ಆಹಾರದ ಮಾದರಿಯ ಪ್ಯಾಕೇಟ್‌ಗಳನ್ನು ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಿ ರಾಜ್ಯಾದ್ಯಂತ ಒಂದೇ ಮಾದರಿಯ ಪ್ಯಾಕೇಟ್‌ನ್ನು ವಿನ್ಯಾಸಗೊಳಿಸಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿಗಳಿಂದ ಪುಡಿರೂಪದ ಆಹಾರ ಮಾದರಿಯ ಪ್ಯಾಕೇಟ್‌ಗಳನ್ನು ಪಡೆಯಲಾಗಿತ್ತು.

ಪ್ರಸ್ತುತ ರಾಜ್ಯದ ಎಲ್ಲಾ ಜಿಲ್ಲೆಗಳ ಆಹಾರ ಮಾದರಿ ಪ್ಯಾಕೇಟ್‌ಗಳನ್ನು ಅವಲೋಕಿಸಿ ಅಂತಿಮವಾಗಿ ಒಂದು ಮಾದರಿ ಪ್ಯಾಕೇಟ್ ಪ್ರತಿಯನ್ನು ವಿನ್ಯಾಸಗೊಳಿಸಲಾಗಿದ್ದು ಈ ಪುಡಿರೂಪದ ಆಹಾರಕ್ಕೆ **"ಪುಷ್ಠಿ"** ಎಂದು ಹೆಸರಿಡಲಾಗಿರುತ್ತದೆ. ಸದರಿ **"ಪುಷ್ಠಿ"** ಪ್ಯಾಕೇಟ್‌ನ ಮೇಲಿರುವ ಉಪಯೋಗಿಸಿರುವ ಪದಾರ್ಥಗಳು, ಪೋಷಕಾಂಶಗಳು, ಸೇವಿಸುವ ಪ್ರಮಾಣ, ಬ್ಯಾಚ್ ಸಂಖ್ಯೆ, ಪ್ಯಾಕ್ ಮಾಡಿದ ದಿನಾಂಕ, ಉಪಯೋಗಿಸಬಹುದಾದ ಕಡೆಯ ದಿನಾಂಕ ಮತ್ತು ತಯಾರಕರ ವಿವರಗಳನ್ನು ತಮ್ಮ ಜಿಲ್ಲೆಗಳ ಆಹಾರ ಮೆನುವಿಗೆ ಅನುಗುಣವಾಗಿ ಬದಲಾಯಿಸಿಕೊಂಡು ಉಳಿದಂತೆ ಲಗತ್ತಿಸಿರುವ ಮಾದರಿಯಲ್ಲಿಯೇ *(12 Micron polyester(Reverse printing) laminated to 12 Micron metalized polyester and re-laminated to 75 Micron polyethylene)* ಈ ಅಂಶಗಳನ್ನೊಳಗೊಂಡ ನೂತನ **"ಪುಷ್ಠಿ"** ಆಹಾರದ ಪ್ಯಾಕೇಟ್‌ನ್ನು ಮುದ್ರಿಸಿ, ಪೂರಕ ಪೌಷ್ಠಿಕ ಆಹಾರದಡಿ ನೀಡಲಾಗುವ ಪುಡಿರೂಪದ ಆಹಾರವನ್ನು ಪ್ಯಾಕ್ ಮಾಡಿ ಅಂಗನವಾಡಿ ಕೇಂದ್ರಗಳ 06 ತಿಂಗಳಿಂದ 3 ವರ್ಷದ ಮಕ್ಕಳಿಗೆ ವಿತರಿಸಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು

ಪ್ರತಿಯನ್ನು:

1) ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ – ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿ ಮುಖಾಂತರ
2) ಎಲ್ಲಾ ಎಂ.ಎಸ್.ಪಿ.ಟಿ.ಸಿ ಅಧ್ಯಕ್ಷರುಗಳಿಗೆ ಸೂಕ್ತ ಕ್ರಮಕ್ಕಾಗಿ – ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿ ಮುಖಾಂತರ

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಚಿತ ಸರಬರಾಜು
ಮಾರಾಟಕ್ಕಲ್ಲ

# ಪುಷ್ಠಿ

ಶಕ್ತಿಯುತ ಪೂರಕ ಪೌಷ್ಠಿಕ ಆಹಾರ

**ಶಿಶುಗಳ ಮತ್ತು ಚಿಕ್ಕಮಕ್ಕಳ ಆರೋಗ್ಯಯುತ ಬೆಳವಣಿಗೆಗಾಗಿ**

6 ತಿಂಗಳಿಂದ 3 ವರ್ಷದ ಅಂಗನವಾಡಿ ಮಕ್ಕಳಿಗೆ

1 ಕಿ.ಗ್ರಾಂ



# ಪುಷ್ಟಿ

ಈ ಪೂರಕ ಪೌಷ್ಠಿಕ ಆಹಾರವನ್ನು
ಅಂಗನವಾಡಿ ಕೇಂದ್ರದಿಂದ
6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪ್ರತಿ
ತಿಂಗಳು ಉಚಿತವಾಗಿ ಮನೆಗೆ ನೀಡಲಾಗುತ್ತಿದೆ.

| | |
|---|---|
| ನಿವ್ವಳ ತೂಕ | : 1ಕೆ.ಜಿ. |
| ಬ್ಯಾಚ್ ಸಂಖ್ಯೆ | : RMA/APR-2018 |
| ಪ್ಯಾಕ್ ಮಾಡಿದ ದಿನಾಂಕ | : 21-04-2018 |
| ಉಪಯೋಗಿಸಬಹುದಾದ ಕಡೆಯ ದಿನಾಂಕ | : 21-07-2018 |

## ತಯಾರಿಸುವ ವಿಧಾನ :



- ತಯಾರಿಸುವ ಮೊದಲು ಕೈಗಳನ್ನು ಶುದ್ಧ ನೀರಿನಿಂದ ತೊಳೆಯಿರಿ. ತಯಾರಿಸುವ ಪಾತ್ರೆಗಳು (ಬಟ್ಟಲು ಮತ್ತು ಚಮಚ) ಶುಚಿಯಾಗಿರುವುದನ್ನು ಖಾತ್ರಿಪಡಿಸಿಕೊಳ್ಳಿ.



- ನಿರ್ದಿಷ್ಟಪಡಿಸಿದ ಪ್ರಮಾಣದಷ್ಟು ಪುಷ್ಠಿ ಪುಡಿಯನ್ನು ಐದು ಪಟ್ಟು ಶುದ್ಧ ಕುಡಿಯುವ ನೀರು ಅಥವಾ ಹಾಲಿನಲ್ಲಿ ಕಲಸಿದ ನಂತರ ಸಣ್ಣ ಉರಿಯಲ್ಲಿ 1 ರಿಂದ 2 ನಿಮಿಷ ಕುದಿಸುವುದು.



- ಆಹಾರವು ಬೆಚ್ಚಗಿರುವಾಗಲೇ ಮಗುವಿಗೆ ಕೊಡುವುದು.

## ಸಂಗ್ರಹಣೆಗೆ ನಿರ್ದೇಶನಗಳು

1. ಒಣಗಿದ ಹಾಗೂ ಸೂರ್ಯನ ಬೆಳಕು ಬೀಳದ ಸ್ಥಳದಲ್ಲಿ ಸಂಗ್ರಹಿಸಿಡಿ.
2. ಪ್ಯಾಕೆಟನ್ನು ತೆರೆದ ತಕ್ಷಣವೇ ಉಪಯೋಗಿಸಿರಿ ಹಾಗೂ ಉಳಿದ ಪ್ರಮಾಣದ ಮಿಶ್ರಣವನ್ನು ಗಾಳಿಯಾಡದಂತೆ ಭದ್ರವಾಗಿ ಡಬ್ಬದಲ್ಲಿ ಮುಚ್ಚಿಡಿ.

fssai
LIC No. : 11215328000608

## ಉಪಯೋಗಿಸಿರುವ ಪದಾರ್ಥಗಳು

ಚಿರೋಟಿ ರವ, ಹುರಿದ ಕಡಲೆ ಹಿಟ್ಟು, ಹುರಿದ ಕಡಿಮೆ ಪ್ರಮಾಣದ ಕೊಬ್ಬಿನಾಂಶವಿರುವ ಸೋಯಾಹಿಟ್ಟು, ಕೆನೆ ರಹಿತ ಹಾಲಿನ ಪುಡಿ (ನಂದಿನಿ), ಪುಡಿ ಬೆಲ್ಲ.




**ಪೋಷಕಾಂಶಗಳು : (ಪ್ರತಿ 100 ಗ್ರಾಂಗೆ)**
**ಸೇವಿಸುವ ಪ್ರಮಾಣ :**
**100 ಗ್ರಾಂಗಳು ಪ್ರತಿದಿನಕ್ಕೆ**
**(4 ಚಮಚಗಳು)**

| | |
|---|---|
| ಶರ್ಕರ ಪಿಷ್ಟ (ಗ್ರಾಂ) | 73.3 |
| ಪ್ರೋಟೀನ್ (ಗ್ರಾಂ) | 16.4 |
| ಶಕ್ತಿ (ಕಿಲೋ ಕ್ಯಾಲ್) | 390 |
| ಕೊಬ್ಬು (ಗ್ರಾಂ) | 3.5 |
| ನಾರು (ಗ್ರಾಂ) | 0.8 |
| ಕ್ಯಾಲ್ಸಿಯಂ (ಮಿ.ಗ್ರಾಂ) | 464.2 |
| ಕಬ್ಬಿಣ (ಮಿ.ಗ್ರಾಂ) | 20.8 |
| ಥಯಾಮಿನ್ (ಮಿ.ಗ್ರಾಂ) | 1.7 |
| ರೈಬೋಫ್ಲೇವಿನ್ (ಮಿ.ಗ್ರಾಂ) | 1.4 |
| ನಯಾಸಿನ್ (ಮಿ.ಗ್ರಾಂ) | 15.2 |
| ಫೋಲಿಕ್ ಆಮ್ಲ (ಮೈಕ್ರೋ.ಗ್ರಾಂ) | 190 |
| ಜೀವಸತ್ವ ಸಿ (ಮಿ.ಗ್ರಾಂ) | 29.4 |
| ಜೀವಸತ್ವ ಎ (ಮೈಕ್ರೋ.ಗ್ರಾಂ) | 407 |

**1 ಕಿ.ಗ್ರಾಂ**

ತಯಾರಕರು :

**ಮಹಿಳಾ ಪೂರಕ ಪೌಷ್ಠಿಕ ಆಹಾರ ತಯಾರಿಕೆ ಹಾಗೂ ತರಬೇತಿ ಕೇಂದ್ರ**

..........................ತಾಲ್ಲೂಕು.......................... ಜಿಲ್ಲೆ..........................

(ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟಿದೆ)